ಓ ಎಸ್ ನಂ. 158/2021
ಡಿ ಡಬ್ಲ್ಯೂ: 3
ದಿನಾಂಕ 06-06-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ: ಶ್ರೀ ಎಂ ಒ ಜೆ ವಕೀಲರಿಂದ:</u>

ಪ್ರಸ್ತುತ ದಾವೆಯನ್ನು 1 ನೇ ಪ್ರತಿವಾದಿಯಾದ ಮಂಜುನಾಥರವರು ಲೋಕೇಶಪ್ಪನವರ ವಿರುದ್ದ ಹೂಡಿರುತ್ತಾರೆ. ಏನು ಪರಿಹಾರ ಕೋರಿರುತ್ತಾರೆಂದು ನನಗೆ ಗೊತ್ತಿದೆ. ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರ ನಡುವೆ ಯಾವ ವ್ಯವಹಾರ ಆಗಿದೆ ಎಂಬುದರ ಬಗ್ಗೆ ನನಗೆ ತಿಳಿದಿದೆ. ವಾದಿ ಹಾಗೂ ಪ್ರತಿವಾದಿ 1 ಮತ್ತು 2 ರ ನಡುವೆ ನೊಂದಾಯಿತ ಕಛೇರಿಯಲ್ಲಿ ಆಗಿರುವ ದಾಖಲಾತಿಗಳನ್ನು ನೋಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 1 ರಲ್ಲಿ ತಿಳಿಸಿರುವಂತಹ 2018 ರ ವ್ಯವಹಾರದ ಸಂದರ್ಭದಲ್ಲಿ ನಾನು ಹಾಜರಿದ್ದೇನಾ ಎಂದರೆ ಸಾಕ್ಷಿಯುದಿನಾಂಕ 10/08/2021 ರ ವ್ಯವಹಾರದ ದಿನ ಹಾಜರಿದ್ದೆ ಎಂದು ನುಡಿದಿರುತ್ತಾರೆ.

2. ದಾವಾ ಸ್ವತ್ತನ್ನು ಪ್ರತಿವಾದಿಗಳು ಮಾರಾಟ ಮಾಡುವುದಾಗಿ ಪ್ರಚುರ ಪಡಿಸಿದ ಮೇರೆಗೆ ವಾದಿ ಸದರಿ 13 ಲಕ್ಷ ರೂಗಳಿಗೆ ಖರೀದಿ

ಮಾಡಲು ಒಪ್ಪಿಕೊಂಡಿದ್ದು, ಅದರಂತೆ 12 ಲಕ್ಷದ 90 ಸಾವಿರ ರೂಗಳನ್ನು ನೀಡಿದ ವ್ಯವಹಾರ ಬಗ್ಗೆ ನನಗೆ ತಿಳಿದಿದೆಯಾ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತು. ಆದರೆ ಸದರಿ ಹಣವನ್ನು ಪ್ರತಿವಾದಿ 1 ಮತ್ತು 2 ರವರು ಸಾಲವಾಗಿ ಪಡೆದಿದ್ದು, ಅದರ ಭದ್ರತೆಗಾಗಿ ವಾದಿ ಕ್ರಯದ ಕರಾರು ಬರೆಸಿಕೊಂಡಿದ್ದು ಸಾಲದ ಹಣವನ್ನು ಮರುಪಾವತಿ ಮಾಡಿದ ನಂತರ ಮರುಪತ್ರ ಬರೆದುಕೊಡುವುದಾಗಿ ಹೇಳಿದ್ದರು ಎಂದು ನುಡಿದಿರುತ್ತಾರೆ. ಮೇಲ್ಕಂಡ ವ್ಯವಹಾರದ ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಆ ರೀತಿ ನಾನು ಸಹಿ ಮಾಡಿರುವ ದಾಖಲೆಯನ್ನು ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಿನಾಂಕ 10/08/2021 ರಂದು ಆದ ವ್ಯವಹಾರವನ್ನು ವಿಡಿಯೋ ರೆಕಾರ್ಡಿಂಗ್ ಮಾಡಿಕೊಳ್ಳಲಾಗಿದೆ ಎಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ವಾದಿಗೆ ಪ್ರತಿವಾದಿಗಳು ನನ್ನ ಮತ್ತು ಇತರ ಸಾಕ್ಷಿದಾರರ ಸಮಕ್ಷಮದಲ್ಲಿ 5 ಲಕ್ಷ ರೂಗಳನ್ನು ನೀಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ವ್ಯವಹಾರ ಆದ ಸಂದರ್ಭದಲ್ಲಿ ವಿಡಿಯೋ ಮಾಡಿಕೊಳ್ಳಲಾಗಿದೆ ಅದೇ ಸಾಕ್ಷಿ ಎಂದು ನುಡಿದಿರುತ್ತಾರೆ.

3. ಪ್ರತಿವಾದಿ 1 ಮತ್ತು 2 ರವರು ನನ್ನ ದೂರದ ಸಂಬಂಧಿಯಾಗಿರುತ್ತಾರೆ. ಆಗಾಗಿ ನಾನು ಪ್ರತಿವಾದಿಗಳ ಜತೆ ವಿಶ್ವಾಸ

ಹೊಂದಿದ್ದೇನೆ ಎಂದರೆ ಸರಿ. ಆ ರೀತಿ ವಿಶ್ವಾಸ ಇದ್ದಿದ್ದರಿಂದ ಪ್ರತಿವಾದಿಗಳ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನಾನು ಸತ್ಯದ ಪರ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿದಿರುತ್ತಾರೆ. ದಿನಾಂಕ 10/08/2021 ರಂದು ಆಗಿದೆ ಎಂದು ಹೇಳಲಾದ ವ್ಯವಹಾರಕ್ಕೆ ಸಂಬಂದಪಟ್ಟಂತೆ ವಿಡಿಯೋ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ವ್ಯವಹಾರ ವಾದಿಯ ಮನೆಯಲ್ಲಿ ನಡೆದಿದ್ದು, ವಿಡಿಯೋ ಮಾಡಲಾಗಿದೆ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.